## 55 ದಿನಗಳ ಬಳಿಕ ರಾಜ್ಯದಲ್ಲಿ ಲಾಕ್‌ಡೌನ್ ಓಪನ್ । ಹಳಿಗೆ ಮರಳಿದ ಜನಜೀವನ

# ಬಾಗಿಲನು ತೆರೆದು...

ರಾಜ್ಯದಲ್ಲಿ ದಿನದಿಂದ ದಿನಕ್ಕೆ ಕರೋನಾ ಸೋಂಕು ಹೆಚ್ಚಾಗುತ್ತಿರುವ ನಡುವೆಯೂ ಕರ್ನಾಟಕ ಅನ್‌ಲಾಕ್‌ನ ಮೊದಲ ದಿನವನ್ನು ಆರಂಭಿಸಿದೆ. 55 ದಿನದ ಬಳಿಕ ಬಸ್, ಆಟೋ, ಟ್ಯಾಕ್ಸಿ, ಸಲೂನ್ ಸೇರಿದಂತೆ ಬಹುತೇಕ ವಲಯಗಳು ಆರಂಭವಾಗಿವೆ. ಕೆಲವರು ಕರೋನಾ ಹೆದರಿಕೆಯಿಂದ ಮನೆಯಲ್ಲಿಯೇ ಉಳಿದರೆ, ಇನ್ನು ಕೆಲವರು ಹೊರಬಂದಿದ್ದಾರೆ. ಅನ್‌ಲಾಕ್‌ನ ಮೊದಲ ದಿನ ಹೇಗಿತ್ತು ಎನ್ನುವ ಸ್ಥೂಲ ಚಿತ್ರಣ ಇಲ್ಲಿದೆ.

### ಬಸ್ ಸಂಚಾರಕ್ಕೆ ಮಿಶ್ರ ಪ್ರತಿಕ್ರಿಯೆ



ಮಂಗಳವಾರದಿಂದ ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧ ಭಾಗಗಳಲ್ಲಿ ಸರಕಾರಿ ಬಸ್‌ಗಳ ಸೇವೆ ಆರಂಭವಾಗಿದ್ದರೂ, ಸಾರ್ವಜನಿಕರಿಂದ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. ಕೆಎಸ್‌ಆರ್‌ಟಿಸಿಯಿಂದ ಸುಮಾರು 1500 ಬಸ್‌ಗಳು ರಸ್ತೆ ಇಳಿದಿದ್ದು, ಬೆಂಗಳೂರಿನಿಂದ ಸುಮಾರು ಆರು ಸಾವಿರ ಮಂದಿ ಪ್ರಯಾಣಿಸಿದ್ದಾರೆ ಎನ್ನಲಾಗಿದೆ. ಇನ್ನು ಬೆಂಗಳೂರಿನಲ್ಲಿ ಬಿಎಂಟಿಸಿ ಬಸ್‌ಗಳು ರೋಡಿಗೆ ಇಳಿದರೂ, ಅನೇಕ ರೂಟ್‌ಗಳನ್ನು ಜನರಲ್ಲಿದೇ ಸಂಚರಿಸಿದ್ದು ಸಹಜವಾಗಿತ್ತು. ಪ್ರಯಾಣಿಕರನ್ನು ಬಸ್‌ನಲ್ಲಿ ಹತ್ತಿಸಿಕೊಳ್ಳುವ ಮೊದಲು, ಥರ್ಮಲ್ ಟೆಸ್ಟ್ ಮಾಡಿದ್ದು ಸಾಮಾನ್ಯವಾಗಿತ್ತು. ಆದರೆ ರಾಜ್ಯದ ಕೆಲವು ಭಾಗದಲ್ಲಿ ವಾಹನ ಚಾಲಕರಿಗೆ ಹಾಗೂ ನಿರ್ವಾಹಕರಿಗೆ ಸೂಕ್ತ ಸ್ಯಾನಿಟೈಸರ್ ಹಾಗೂ ಮಾಸ್ಕ್ ನೀಡದೇ ಇರುವುದು ಗೊಂದಲಕ್ಕೆ ಕಾರಣವಾಗಿದೆ.

### ರಸ್ತೆಗೆ ಇಳಿದ ಆಟೋ, ಕ್ಯಾಬ್

[illegible]



### ಸಲೂನ್ ಮುಂದೆ ಸಾಲು ನಿಂತ ಜನ



ಸಾಮಾನ್ಯವಾಗಿ ಕ್ಷೌರಿಕರು ಮಂಗಳವಾರ ಅಂಗಡಿಯನ್ನು ತೆರೆಯುವುದಿಲ್ಲ. ಆದರೆ ಈಗ ಮಾತ್ರ 55 ದಿನದ ಲಾಕ್‌ಡೌನ್ ಸಡಿಲಿಕೆ ಬಳಿಕ ಸಲೂನ್, ಬ್ಯೂಟಿ ಪಾರ್ಲರ್ ಆರಂಭಕ್ಕೆ ಅವಕಾಶ ನೀಡಿರುವುದರಿಂದ ಮಂಗಳವಾರವಿದ್ದರೂ ಬಹುತೇಕರು ತಮ್ಮ ಅಂಗಡಿಯನ್ನು ತೆರೆದಿದ್ದರು. ಕಳೆದ ಎರಡು ತಿಂಗಳಿನಿಂದ ಕಟ್ಟಿಂಗ್‌ಗೆ ಕಾದು ಕುಳಿತ್ತಿದ್ದ ಜನರು ಸಲೂನ್‌ಮುಂದೆ ಕಾದು ನಿಂತರೆ, ಕೆಲ ಮಹಿಳೆಯರು ಬ್ಯೂಟಿ ಪಾರ್ಲರ್ ಮುಂದೆ ನಿಂತಿರುವುದು ಸಹಜವಾಗಿತ್ತು. ಸಲೂನ್ ಹಾಗೂ ಬ್ಯೂಟಿ ಪಾರ್ಲರ್‌ಗೆ ಆಗಮಿಸಿದ್ದ ಬಹುತೇಕರು ಮಾಸ್ಕ್ ಧರಿಸಿದ್ದರೂ, ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು ಭಾರಿ ಸಮಸ್ಯೆ ಎನ್ನುವ ಮಾತುಗಳನ್ನು ಕೆಲ ಅಂಗಡಿ ಮಾಲೀಕರು ಹಾಗೂ ಸಿಬ್ಬಂದಿ ಹೇಳಿದ್ದಾರೆ.

### ರಾಜಧಾನಿಯಲ್ಲಿ ಸಹಜ ಟ್ರಾಫಿಕ್

ಕಳೆದ 55 ದಿನಗಳಿಂದ ರಾಜಧಾನಿ ಬೆಂಗಳೂರಿನ ರಸ್ತೆಗಳು [illegible]



## ರಾಜ್ಯದಲ್ಲಿ ಒಂದೇ ದಿನ 149 ಮಂದಿಗೆ ಸೋಂಕು

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

- ದಾಖಲೆ ಪ್ರಮಾಣದ ಕರೋನಾ ವೈರಸ್ ಏರಿಕೆಗೆ ಜನ ತತ್ತರ
- ಮಂಡ್ಯ ಒಂದರಲ್ಲೇ 71 ಮಂದಿಗೆ ಸೋಂಕು ಕಾಣಿಸಿಕೊಂಡಿದೆ
- ಮಹಾರಾಷ್ಟ್ರದಿಂದ ಬಂದವರಿಂದ ಹಬ್ಬಿದ ಕರೋನಾ

ರಾಜ್ಯದಲ್ಲಿ ಕರೋನಾ ಅಟ್ಟಹಾಸ ಮುಂದುವರಿದಿದ್ದು ಮಂಗಳವಾರ 149 ಹೊಸ ಪ್ರಕರಣಗಳು ಪತ್ತೆಯಾಗಿವೆ. ಸೋಂಕಿತರ ಸಂಖ್ಯೆ 1395ಕ್ಕೆ ಏರಿದ್ದು ಮೂವರು ಮೃತಪಟ್ಟಿದ್ದಾರೆ.

ಬಳ್ಳಾರಿಯಲ್ಲಿ 61 ವರ್ಷದ ರೋಗಿ 1118, ವಿಜಯಪುರದಲ್ಲಿ 65 ವರ್ಷದ ರೋಗಿ 1291 ಹಾಗೂ ಬೆಂಗಳೂರಿನಲ್ಲಿ 54 ವರ್ಷದ ರೋಗಿ 1364 ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ಈ ಮೂಲಕ ರಾಜ್ಯದಲ್ಲಿ ಕರೋನಾ ಗೆ ಬಲಿಯಾದವರ ಸಂಖ್ಯೆ 40 ತಲುಪಿದೆ.

ಮಂಗಳವಾರ ಹೊಸದಾಗಿ ಪತ್ತೆಯಾದ 149 ಸೋಂಕಿತರಲ್ಲಿ 113 ಜನ ಅಂತರ ರಾಜ್ಯ ಪ್ರಯಾಣ ಬೆಳೆಸಿದವರು. ಇದರಲ್ಲಿ ಬಹುತೇಕರು ಮಹಾರಾಷ್ಟ್ರದಿಂದ ಬಂದವರು ಎನ್ನುವುದು ಆತಂಕಕಾರಿ ವಿಷಯವಾಗಿದೆ. ಮಂಡ್ಯ ಒಂದೇ ಜಿಲ್ಲೆಯಲ್ಲಿ 71 ಪ್ರಕರಣಗಳು ಪತ್ತೆಯಾಗಿವೆ. ಇವರೆಲ್ಲರೂ ಮುಂಬಯಿಯಿಂದ ಬಂದಿರುವ ಪ್ರಯಾಣ ಹಿನ್ನೆಲೆ ಹೊಂದಿದ್ದಾರೆ. ಜಿಲ್ಲೆಯಲ್ಲಿ ಸೋಂಕಿತರ ಸಂಖ್ಯೆ ಒಟ್ಟು 160 ಆಗಿದ್ದು ಅತಿ ಹೆಚ್ಚು ಸೋಂಕಿತರನ್ನು ಹೊಂದಿದ ಎರಡನೇ ಜಿಲ್ಲೆ ಆಗಿದೆ.

5

## ರಾಜ್ಯದಲ್ಲೀಗ 40 ಪ್ರಯೋಗಾಲಯಗಳು

ರಾಜ್ಯದಲ್ಲಿ ಸೋಂಕಿತರು ಶಂಕಿತರ ಸಂಖ್ಯೆ ಹೆಚ್ಚಾಗುತ್ತಿದ್ದಂತೆ ಪರೀಕ್ಷೆಗಾಗಿ ಪ್ರಯೋಗಾಲಯಗಳನ್ನೂ ಹೆಚ್ಚಿಸಲಾಗುತ್ತಿದೆ. ರಾಜ್ಯದಲ್ಲಿ 40 ಪ್ರಯೋಗಾಲಯಗಳು ತಲೆ ಎತ್ತಿವೆ. 28 ಸರಕಾರಿ ಹಾಗೂ 12 ಖಾಸಗಿ ಪ್ರಯೋಗಾಲಯಗಳು ಕೋವಿಡ್-19 ಪರೀಕ್ಷೆಗೆ ಸಿದ್ಧವಾಗಿವೆ. ಇವುಗಳ ಮೂಲ ರಾಜ್ಯದಲ್ಲೀಗ ದಿನಕ್ಕೆ 8000 ಪರೀಕ್ಷೆಗಳನ್ನು ನಡೆಸಬಹುದಾಗಿದೆ. ಈ ತಿಂಗಳ ಅಂತ್ಯಕ್ಕೆ 60 ಪ್ರಯೋಗಾಲಯಗಳನ್ನು ಸಿದ್ಧಪಡಿಸುವ ಗುರಿಯನ್ನು ರಾಜ್ಯ ಸರಕಾರ ಹೊಂದಿದೆ.

# ಒಂದೇ ದಿನ 149 ಮಂದಿಗೆ ಸೋಂಕು

← ಮೊದಲಪುಟದಿಂದ

ಬೆಂಗಳೂರಿನಲ್ಲಿ 251 ಸೋಂಕಿತರಿದ್ದು, ನಗರ ಮೊದಲ ಸ್ಥಾನದಲ್ಲಿದೆ. ಕಳೆದ ನಾಲ್ಕು ದಿನಗಳಲ್ಲಿ ವಿವಿಧ ರಾಜ್ಯಗಳಿಂದ 5 ರೈಲುಗಳು ಬೆಂಗಳೂರಿಗೆ ಆಗಮಿಸಿದ್ದು ಅದರಲ್ಲಿ 1,527 ಮಂದಿ ರಾಜ್ಯಕ್ಕೆ ಪ್ರಯಾಣ ಬೆಳೆಸಿದ್ದಾರೆ. ಇನ್ನು ಅನೇಕರು ಖಾಸಗಿ ವಾಹನದ ಮೂಲಕ ಬಂದಿದ್ದಾರೆ.

**ಕಾಫಿ ನಾಡಿಗೂ ಕಾಲಿಟ್ಟ ಕರೋನಾ:** ಹಸಿರು ವಲಯವಾಗಿದ್ದ ಕಾಫಿ ನಾಡು ಚಿಕ್ಕಮಗಳೂರಿಗೂ ಕರೋನಾ ಕರಿ ಛಾಯೆ ಆವರಿಸಿದೆ. ಜಿಲ್ಲೆಯಲ್ಲಿ 5 ಜನರಲ್ಲಿ ಸೋಂಕು ಪತ್ತೆಯಾಗಿದ್ದು, ತಂಪಾಗಿದ್ದ ಮಲೆನಾಡಿನಲ್ಲಿ ಭಯದ ವಾತಾವರಣ ನಿರ್ಮಾಣವಾಗಿದೆ. ಮುಂಬೈನಿಂದ ಬಂದಿದ್ದ ಗರ್ಭಿಣಿಯಲ್ಲಿ ಸೋಂಕು ಪತ್ತೆಯಾಗಿದೆ. ತರೀಕೆರೆ ಪಟ್ಟಣದ 27 ವರ್ಷದ ಗರ್ಭಿಣಿಯನ್ನು ಮೇ 16ರಂದು ಪರೀಕ್ಷೆಗೆ ಒಳಪಡಿಸಲಾಗಿತ್ತು. ವರದಿಯಲ್ಲಿ ಸೋಂಕು ತಗುಲಿರುವುದು ದೃಢಪಟ್ಟಿದೆ. ಮೂಡಿಗೆರೆ ತಾಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸೇವೆ ಸಲ್ಲಿಸುತ್ತಿದ್ದ 43 ವರ್ಷದ ವೈದ್ಯರಲ್ಲೂ ಸೋಂಕು ಪತ್ತೆಯಾಗಿರುವುದು ಆತಂಕ ಹುಟ್ಟಿಸಿದೆ.

## ಮಂಗಳವಾರ ಪತ್ತೆಯಾದ ಪ್ರಕರಣಗಳು

ಮಂಡ್ಯ-71
ದಾವಣಗೆರೆ-22
ಕಲಬುರಗಿ-13
ಶಿವಮೊಗ್ಗ-10
ಬೆಂಗಳೂರು ನಗರ-06
ಬಾಗಲಕೋಟೆ-05
ಉತ್ತರ ಕನ್ನಡ-04
ಉಡುಪಿ-04
ಹಾಸನ-03
ವಿಜಯಪುರ, ಬೀದರ್, ಗದಗ, ಚಿತ್ರದುರ್ಗ ಹಾಗೂ ಯಾದಗಿರಿಯಲ್ಲಿ ತಲಾ 01